ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 13.03.2024.

**<u>ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಆರ್.ಜೆ.ಪಿ. ವಕೀಲರಿಂದಃ</u>**

ನಾನು ಬಾಗಹಿಪ್ಪರಗಾ ಗ್ರಾಮ ಬಿಟ್ಟು ಸುಮಾರು 30 ವರ್ಷವಾಗಿರುತ್ತದೆ. ನಾನು ಬೆಂಗಳೂರಿನಲ್ಲಿ ಸುಮಾರು 15 ವರ್ಷಗಳ ಕಾಲ ಇದ್ದೆ. ಸದ್ಯ ನಾನು ಕಲಬುರಗಿಯಲ್ಲಿ 15 ವರ್ಷಗಳಿಂದ ಇರುತ್ತೇನೆ. ನನಗೂ ಮತ್ತು ಕುದಮೂರು ಗ್ರಾಮಕ್ಕೂ ಯಾವುದೇ ಸಂಬಂಧ ಇರುವುದಿಲ್ಲ. ಈ ದಾವೆಯನ್ನು ಯಾರು ಮಾಡಿರುತ್ತಾರೆ, ಯಾವ ಸರ್ವೆ ನಂಬರ ಮೇಲೆ ಮಾಡಿರುತ್ತಾರೆ ಎಂಬುವುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೀಗೆ ಬರೆಯಿರಿ ಎಂದು ನಾನು ಹೇಳಿರುವುದಿಲ್ಲ. ದಾವಾ ಸ್ವತ್ತುಗಳ ಭೂಮಿಯನ್ನು ಯಾರು ಮಾರಾಟ ಮಾಡಿರುತ್ತಾರೆ ಹಾಗೂ ಯಾರು ತೆಗೆದುಕೊಂಡಿರುತ್ತಾರೆ ಎಂಬುವುದರ ಬಗ್ಗೆ ನನಗೆ ಮಾಹಿತಿ ಇಲ್ಲ.

<u>**ಮರು ವಿಚಾರಣೆಃ** ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**